| | 96-97 | 97-98 | 98-99 (28-9-99) |
|---|---|---|---|
| 1) ದಾಳಿಗಳ ಸಂಖ್ಯೆ | 575 | 650 | 434 |
| 2) ದಾಖಲು ಮಾಡಿದ ಮೊಕದ್ದಮೆಗಳ ಸಂಖ್ಯೆ | 91 | 98 | 73 |
| 3) ಅಪರಾಧಿಗಳ ಸಂಖ್ಯೆ | 85 | 99 | 82 |
| 4) ವಶಪಡಿಸಿಕೊಂಡ ವಾಹನಗಳು | 1 | 7 | - |
| 5) ವಶಪಡಿಸಿಕೊಂಡ ಮದ್ಯ | ಲೀ. 260 020 | ಲೀ. 2020. 780 | ಲೀ. 2155 620 |
| 6) ವಶಪಡಿಸಿಕೊಂಡ ಸಾರಾಯಿ | 244.600 | 953.400 | 158.600 |

*ವಕ್ಫ್‌ಗೆ ಸೇರಿದ ಆಸ್ತಿಯ ಕಟ್ಟಡಗಳ ನಿರ್ಮಾಣ ಮಾಡಿ ಹಂಚಿಕೆಯಲ್ಲಿ ಅವ್ಯವಹಾರ.*

937(1068) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್‌ಗೆ ಸೇರಿದ ಆಸ್ತಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿ ಅವುಗಳ ಹಂಚಿಕೆಯಲ್ಲಿ ಹಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಅದರಲ್ಲಿ ಶಾಮೀಲಾಗಿರುವವರು ಯಾರು ಯಾರು? ಸರ್ಕಾರದ ವಕ್ಫ್ ಆಸ್ತಿ ರಕ್ಷಣೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು?

3. ವಿರಾಜಪೇಟೆ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿಯಿರುವ ಆಸ್ತಿಯನ್ನು ಕೆಲವರು ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

4. ಹಾಗಿದ್ದಲ್ಲಿ ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

1. ಇಲ್ಲ

2. ಉದ್ಭವಿಸುವುದಿಲ್ಲ

3. ಇದರಲ್ಲಿ ಒತ್ತುವರಿ ಯಾವುದು ಇಲ್ಲ, ಅದರೂ ಸಹ ವಿರಾಜಪೇಟೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ಮಸ್ಜೀದ್-ಎ-ಅಜಮ್‌ಗೆ ಸೇರಿದ ಜಮೀನಿನಲ್ಲಿ 0.54 ಸೆಂಟ್ಸ್ ವಿಸ್ತೀರ್ಣದ ಜಮೀನಾಗಿರುತ್ತದೆ. ಈ ಜಮೀನಿನಲ್ಲಿ 2 ವಾಸದ ಮನೆಗಳು ಮತ್ತು 3 ಅಂಗಡಿಗಳು ಭಾಗಶಃ ಜಮೀನಿನಲ್ಲಿ ಕಟ್ಟಿರುತ್ತವೆ. ಸದರಿ ಅಂಗಡಿ ಮತ್ತು ಮನೆಗಳು ಮಸ್ಜೀದ್-ಎ-ಅಜಮ್ ಆಡಳಿತದಲ್ಲಿ (ವ್ಯವಸ್ಥೆಯಲ್ಲಿ) ಬಾಡಿಗೆಗೆ ಕೊಡಲಾಗಿದೆ.

4. ಉದ್ಭವಿಸುವುದಿಲ್ಲ.